ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300
ಫ್ಯಾಕ್ಸ್: 080–23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: ಕೆ4/ಕೆ.ಎಸ್.ಕ್ಯು.ಎ.ಎ.ಸಿ/ಶಾಲಾಸಿದ್ಧಿ/30/2020–21 ದಿನಾಂಕ: 15.06.2021

## ಜ್ಞಾಪನ

ವಿಷಯ:– 2020–21 ನೇ ಸಾಲಿನಲ್ಲಿ 'ಶಾಲಾಸಿದ್ಧಿ' ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ವ–ಮೌಲ್ಯಮಾಪನ ಪ್ರಕ್ರಿಯೆಯ ಕುರಿತು.

ಉಲ್ಲೇಖ:– 1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ: ಸಶಿಕಾ/ಶಾಲಾಸಿದ್ಧಿ/ಆಂಗ್ಲಕೋಶ/2020–21, ದಿನಾಂಕ: 05.01.2021.

2. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 20.03.2021

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020–21 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ "ಶಾಲಾಸಿದ್ಧಿ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕಾಗಿ "ಶಾಲಾಸಿದ್ಧಿ" ಮಾರ್ಗಸೂಚಿ ಸಾಹಿತ್ಯ ಪುಸ್ತಕಗಳನ್ನು ಎರಡು ಭಾಷೆಗಳಲ್ಲಿ (ಕನ್ನಡ ಮತ್ತು ಆಂಗ್ಲ) ಮುದ್ರಿಸಿ, ಸರಬರಾಜು ಮಾಡಲಾಗಿದ್ದು, ರಾಜ್ಯ/ಜಿಲ್ಲೆ/ತಾಲ್ಲೂಕು ಹಂತದಲ್ಲಿ ತರಬೇತಿ ಕಾರ್ಯಗಳು ಪೂರ್ಣಗೊಂಡಿರುತ್ತದೆ.

ದಿನಾಂಕ: 20.03.2021 ರಂದು ಸ್ವ–ಮೌಲ್ಯಮಾಪನಕ್ಕೆ ಒಳಪಡಿಸಬೇಕಾದ ಜಿಲ್ಲಾವಾರು ಸರ್ಕಾರಿ ಶಾಲೆ/ಕಾಲೇಜುಗಳ ಪಟ್ಟಿಯನ್ನು, ಆಯಾ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಇ–ಮೇಲ್ ಮುಖಾಂತರ ಕಳುಹಿಸಿ, ಶಾಲಾ/ಕಾಲೇಜುಗಳ ಮುಖ್ಯಸ್ಥರು ಸ್ವ–ಮೌಲ್ಯಮಾಪನ ವರದಿಯನ್ನು ತಮ್ಮ ಹಂತದಲ್ಲಿ ಸಿದ್ಧಪಡಿಸಿಕೊಂಡು ಶಾಲಾಸಿದ್ಧಿ Web portal ನಲ್ಲಿ Upload ಮಾಡುವಂತೆ ತಿಳಿಸಲಾಗಿತ್ತು. ಅದರಂತೆ SATS ನಿಂದ ಪಡೆಯಲಾದ ರಾಜ್ಯದ ಒಟ್ಟು 48897 ಸರ್ಕಾರಿ ಶಾಲಾ/ಕಾಲೇಜುಗಳಲ್ಲಿ 32175 ಶಾಲೆ/ಕಾಲೇಜುಗಳು ಸ್ವ–ಮೌಲ್ಯಮಾಪನದ ವರದಿಯನ್ನು Upload ಮಾಡುವ ಕಾರ್ಯವನ್ನು ಪೂರ್ಣಗೊಳಿಸಿದ್ದು, 4806 ಶಾಲೆ/ಕಾಲೇಜುಗಳ ವರದಿ Upload ಮಾಡುವ ಕಾರ್ಯವು ಪ್ರಗತಿಯಲ್ಲಿದೆ ಹಾಗೂ 11916 ಶಾಲೆ/ಕಾಲೇಜುಗಳು ಸ್ವ–ಮೌಲ್ಯಮಾಪನದ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದಿಲ್ಲ (ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ).

'ಶಾಲಾಸಿದ್ಧಿ' ಕಾರ್ಯಕ್ರಮವು ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗಿದ್ದು, ಸ್ವ–ಮೌಲ್ಯಮಾಪನದ ಕಾರ್ಯವು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳಬೇಕಾಗಿರುವುದರಿಂದ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿ (ನಮೂನೆ 1 ಮತ್ತು 2) ಮಾಹಿತಿಯನ್ನು ಭರ್ತಿ ಮಾಡುವಾಗ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಶಾಲಾಸಿದ್ಧಿ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಿಂದ ಪಡೆದು ಕಛೇರಿಯಿಂದ ಕಳುಹಿಸಲಾಗಿರುವ Excel Sheet ನಲ್ಲಿಯೇ ಭರ್ತಿ ಮಾಡಿ ಸಾಫ್ಟ್ ಪ್ರತಿಯನ್ನು ದಿನಾಂಕ: 24.06.2021 ರೊಳಗೆ ಈ ಕಛೇರಿ ಇ–ಮೇಲ್ ವಿಳಾಸ **ksqaacbangalore@gmail.com** ಕ್ಕೆ ಕಳುಹಿಸಲು ಈ ಮೂಲಕ ತಿಳಿಸಿದೆ.

ವಂದನೆಗಳೊಂದಿಗೆ,

ತಮ್ಮ ಸಂಬುಗೆಯ,

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

**ಕ್ರಮಕ್ಕಾಗಿ,**

1. ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ
2. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
3. ಸಂಬಂಧಿಸಿದ ಜಿಲ್ಲಾ ಹಾಗೂ ತಾಲ್ಲೂಕು ಶಾಲಾಸಿದ್ಧಿ ನೋಡಲ್ ಅಧಿಕಾರಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ಮತ ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ,**

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ರವರಿಗೆ.
2. ಮಾನ್ಯ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು ರವರಿಗೆ.